ಸರಕಾರಿ ಪ್ರೌಢಶಾಲೆಗಳ ಮಂಜೂರಾತಿ ಬಗ್ಗೆ

೧೫೭೭ (೪೩೪) ಶ್ರೀ ಪಿ. ಸಿ. ಸಿದ್ದನ ಗೌಡರ್ (ಕಲಘಟಗಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ ?

ಕಲಘಟಗಿ ತಾಲ್ಲೂಕು, ಸಂಗಮೇಶ್ವರ, ತಬಕನ ಹೊನ್ನಳ್ಳಿ ಕುರಡಿಕೇರಿ ಮತ್ತು ಸರಶೆಟ್ಟಿ ಕೊಪ್ಪ ಗ್ರಾಮಗಳಲ್ಲಿ ಸರ್ಕಾರಿ ಪ್ರೌಢ ಶಾಲೆ ತೆರೆಯಲು ಸರ್ಕಾರದವರು ಕ್ರಮ ತೆಗೆದುಕೊಳ್ಳುವರೆ ?

ಶ್ರೀ ಡಿ. ಮಂಜುನಾಥ್ (ವಿದ್ಯಾ ಸಚಿವರು).—

ಇಲ್ಲ. ೧೯೮೬-೮೭ನೇ ಸಾಲಿಗೆ ಯಾವುದೇ ಸರ್ಕಾರಿ-ಖಾಸಗಿ ಪ್ರೌಢ ಶಾಲೆಗಳನ್ನು ತೆರೆಯ ಬಾರದೆಂದು ಸರ್ಕಾರವು ನಿರ್ಧರಿಸಿದೆ.

ಕಲಘಟಗಿ ತಾಲ್ಲೂಕಿನ ನೀರಾವರಿ ಕೆರೆಗಳ ಬಗ್ಗೆ

೧೫೮೮ (೪೨೬) ಶ್ರೀ ಪಿ. ಸಿ. ಸಿದ್ದನಗೌಡರ್ (ಕಲಘಟಗಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ ?

ಕಲಘಟಗಿ ತಾಲ್ಲೂಕಿನಲ್ಲಿ ನೀರಾವರಿ ಕೆರೆಗಳ ಸಂಖ್ಯೆ ಎಷ್ಟು ? ಹಾಗೂ ಅವುಗಳನ್ನು ದುರಸ್ತಿ ಮಾಡಲು ಈ ಸಾಲಿನಲ್ಲಿ ಎಷ್ಟು ಹಣ ಮಂಜೂರು ಮಾಡಲಾಗಿದೆ.

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಕಲಘಟಗಿ ತಾಲ್ಲೂಕಿನಲ್ಲಿ ಇರುವ ಸಣ್ಣ ನೀರಾವರಿ ಕೆರೆಗಳ ಸಂಖ್ಯೆ: ೪೪೨. ಇವುಗಳ ದುರಸ್ತಿಗಾಗಿ ಈ ಸಾಲಿಗೆ ೯.೩೧೭ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ.

ಹುಬ್ಬಳ್ಳಿ ತಾಲ್ಲೂಕಿನ ಹೆಬಸೂರು-ಕಿರೇಸೂರು ಗ್ರಾಮಗಳ ರೈತರ ಜಮೀನಿಗೆ ಯೋಗ್ಯ ಪರಿಹಾರ ನೀಡದಿರುವ ಬಗ್ಗೆ

೧೫೯೯ (೪೨೬) ಶ್ರೀ ಪಿ.ಸಿ.ಸಿದ್ದನಗೌಡ (ಕಲಘಟಗಿ) ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಹುಬ್ಬಳ್ಳಿ ತಾಲ್ಲೂಕು ಹೆಬಸೂರು, ಕಿರೇಸೂರು ಗ್ರಾಮಗಳ ರೈತರ ಜಮೀನನ್ನು ನೀರಾವರಿ ಕಾಲುವೆಗಳಿಗಾಗಿ ವಶಪಡಿಸಿಕೊಂಡ ಜಮೀನು ಎಷ್ಟು ಹಾಗೂ ಪ್ರತಿ ಎಕರೆಗೆ ನಿಗದಿಗೊಳಿಸಿದ ಪರಿಹಾರ ಧನದ ಮೊತ್ತ ಎಷ್ಟು ?

ಆ) ಈ ಬಗ್ಗೆ ಸಂಬಂಧಪಟ್ಟ ರೈತರಿಗೆ ಈವರೆಗೂ ಸೂಕ್ತ ಪರಿಹಾರ ದೊರಕದಿರುವುದು ನಿಜವೆ ?

ಇ) ಹಾಗಿದ್ದಲ್ಲಿ ಅವರಿಗೆ ಕೂಡಲೇ ಪರಿಹಾರ ಧನವನ್ನು ನೀಡಲು ಕ್ರಮ ಕೈಕೊಳ್ಳಲಾಗಿ ವುದೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಒಟ್ಟು ೩೫೬ ಎಕರೆ ೨೬ ಗುಂಟೆ ಜಮೀನನ್ನು ನೀರಾವರಿಕಾಲುವೆ ರಚನೆಗಾಗಿ ವಶಪಡಿಸಿ ಕೊಳ್ಳಲಾಗಿದೆ. ಎಕರೆಗೆ ರೂ. ೧೫೦೦ ರಿಂದ ೩೫೦೦ ರೂ. ವರೆಗು ವಿಶೇಷ ಭೂ ಸ್ವಾಧೀನ ಅಧಿಕಾರಿಗಳು ಪ್ರತಿ ಜಮೀನಿನ ಫಲವತ್ತತೆ ಆಧಾರದ ಮೇಲೆ ನಿಗದಿ ಮಾಡಿರುತ್ತಾರೆ.

ಆ) ಮತ್ತು ಇ) ಈಗಾಗಲೇ ಹಲವಾರು ಜನರಿಗೆ ಪರಿಹಾರ ಧನವನ್ನು ಕೊಡಲಾಗಿದೆ. ಉಳಿದವರಿಗೆ ಪರಿಹಾರ ಧನವನ್ನು ಕೊಡಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ.